
ಅನಿರೀಕ್ಷಿತ ಘಟನೆಯಿಂದ ಗಾಬರಿಗೊಂಡ ಗಂಡ ಹೆಂಡತಿ ಇಬ್ಬರೂ ಗರಬಡಿದಂತೆ ನಿಂತಿರುವಾಗ, ಅವರಲ್ಲೊಬ್ಬ ‘ನಮ್ಮ ಮುಖಂಡನಿಗೇ ನೀನು ಸ್ಕೆಚ್ ಹಾಕಿದ್ದೀಯಂತೆ. ನಿನ್ನ ಗ್ರಹಚಾರ ಇವತ್ತು ಬಿಡಿಸ್ತೀವಿ’ ಎಂದ.

ಅವರ ಧರ್ಮದ ಮುಖಂಡನನ್ನು ಕೊಲ್ಲಲು ಈತ ಹಾಕಿದ್ದ ಯೋಜನೆಯ ಗುಟ್ಟು ಈತನ ಪಕ್ಷದವರಿಂದಲೇ ಅದು ಹೇಗೋ ‘ಆ ಧರ್ಮದ’ ಕೆಲವರಿಗೆ ಗೊತ್ತಾಗಿ, ಅದಕ್ಕಿಂತ ಮುಂಚೆ ಇವನನ್ನೇ ಎತ್ತಿ ಬಿಡುವ ನಿರ್ಧಾರ ಮಾಡಿ ಅವರೆಲ್ಲಾ ಅಲ್ಲಿಗೆ ಬಂದಿದ್ದರು. ಈತನಿಗೆ ಕೈಕಾಲು ನಡುಗತೊಡಗಿದವು.

ಕಣ್ಣೆದುರು ತನ್ನ ಮನೆಯಲ್ಲೇ ನಡೆಯುತ್ತಿರುವ ವಿದ್ಯಮಾನಗಳಿಂದ ಹೆಂಡತಿ



ಆಘಾತಗೊಂಡರೂ, ಸಮಯಪ್ರಜ್ಞೆಯಿಂದ ಕೂಡಲೇ ಹಿತ್ತಲ ಬಾಗಿಲಿನ ಮೂಲಕ ಪಕ್ಕದ ಮನೆಗೆ ಓಡಿ, ಎಲ್ಲವನ್ನೂ ಸಂಕ್ಷಿಪ್ತವಾಗಿ ವಿವರಿಸಿ, ಅಲ್ಲಿಂದ ಮಿಂಚಿನಂತೆ ತನ್ನ ಸ್ನೇಹಿತೆ ಮತ್ತು ಆಕೆಯ ಗಂಡನನ್ನು ಕರೆತಂದಳು. ಇವನ ತಲೆ ಹೊಡೆಯಲು ಬಂದಿದ್ದ ಆ ಗುಂಪಿನವರನ್ನು ಪಕ್ಕದ ಮನೆಯವನ ಕೂಗು ತಡೆದು ನಿಲ್ಲಿಸಿತು. ಪಕ್ಕದ ಮನೆಯಾತ ಆ ಗುಂಪಿಗೆ ಸಮಾಧಾನ ಮಾಡಿ, ‘ನೆರೆಹೊರೆಯವರಾದ ನಾವಿಬ್ಬರು ಬೇರೆ ಬೇರೆ ಧರ್ಮದವರಾದರೂ ಕೂಡ ಚಿಕ್ಕಂದಿನಿಂದ ಜೊತೆಯಲ್ಲಿ ಆಡಿಕೊಂಡು ಅನ್ಯೋನ್ಯವಾಗಿ ಬೆಳೆದಿದ್ದೇವೆ. ಈತನ ಗುಣ ಸ್ವಭಾವ ನನಗೆ ಚೆನ್ನಾಗಿ ಗೊತ್ತು. ಈತ ಯಾರದೋ ಪ್ರಭಾವಕ್ಕೊಳಗಾಗಿ, ಕೋಪದಲ್ಲಿ ಮಾತನಾಡುವಾಗ, ಯೋಚಿಸದೆ ಏನೋ ಹೇಳಿರಬಹುದು. ಆದರೆ ಒಬ್ಬರನ್ನು ಕೊಲ್ಲುವಷ್ಟು ಕೆಟ್ಟವನಲ್ಲ ನನ್ನ ಈ ಸ್ನೇಹಿತ’ ಎಂಬ ಅವನ ಮಾತುಗಳಿಂದ ಸ್ವಲ್ಪ ಸಮಾಧಾನಗೊಂಡಂತೆ ಕಂಡ ಅವರೆಲ್ಲಾ ‘ನಮಗೆ ಸಿಕ್ಕ ತಪ್ಪು ಮಾಹಿತಿಯಿಂದ ಇಲ್ಲಿಗೆ ಬಂದೆವು, ಕ್ಷಮಿಸಿ’ ಎನ್ನುತ್ತಾ ಹೊರಟುಹೋದರು. ಇದಾದ ಸ್ವಲ್ಪ ಹೊತ್ತಿನಲ್ಲೇ ಇವರ ಮನೆಯ ಮುಂದಿನ ರಸ್ತೆಯಲ್ಲಿ ಕೋಮುಸೌಹಾರ್ದ ಜಾಥಾ ಶಾಂತಿಯುತವಾಗಿ ಸಾಗುವುದನ್ನು ಇವರೆಲ್ಲಾ ನೆಮ್ಮದಿಯಿಂದ ನಿಂತು ನೋಡಿದರು.

ಬಹಳ ದಿನಗಳಿಂದ ಮಾತುಬಿಟ್ಟಿದ್ದ ಪಕ್ಕದ ಮನೆಯ ಸ್ನೇಹಿತನನ್ನು ಈತ ತಬ್ಬಿಕೊಂಡ. ಪಶ್ಚಾತ್ತಾಪದ ಕಣ್ಣೀರು ಇಬ್ಬರ ಬಟ್ಟೆಯನ್ನೂ ತೋಯಿಸಿತು. ಪರಸ್ಪರ ನಂಬಿಕೆಗಳು ಗಟ್ಟಿಯಾಗಿದ್ದರೆ ಮೂರನೆಯವರ ಮಾತುಗಳು ನಮ್ಮನ್ನು ಬೇರ್ಪಡಿಸಲಾರವು ಎಂಬಂತೆ ಸ್ನೇಹಿತರಿಬ್ಬರ ಆಲಿಂಗನ ಗಟ್ಟಿಯಾಗಿತ್ತು. ಇಬ್ಬರೂ ಮನೆಯ ಹಿತ್ತಲಿಗೆ ಬಂದಾಗ, ಜ್ವರ ಬಿಟ್ಟಿದ್ದ ಮಗು ನಗುನಗುತ್ತಾ ತಾಯಿಯ ಕಂಕುಳಲ್ಲಿ ಆಡುತ್ತಿತ್ತು. ಈತ ಕಡಿದು ಹಾಕಿದ್ದ ಕರಿಬೇವಿನ ಮರದ ಬುಡ ಮಳೆಯ ಸಿಂಚನಕ್ಕೆ ಚಿಗುರೊಡೆದು ನಗುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in

## ನಕ್ಕುಬಿಡಿ

ಪ್ರತಿಭಟನೆಗೆ ಸಂಸತ್ತಿನಲ್ಲಿ ಬಾಂಗ್ಲ ಬರಹದ ಬ್ಯಾಗ್



ನಿಮ್ಮದೇನ್ರೀ ಅವತಾರ..? ನನ್ನ ಫ್ಯಾಷನ್ ಬ್ಯಾಗ್ ಕೊಂಡು ಹೋಗ್ತಿದ್ದಿರಲ್ಲಾ..!

ಅರವಿಂದ: ಕಿಟ್ಟು, ನಿಮ್ಮ ಮಗ ಇತ್ತೀಚೆಗೆ ಹಳೆಯ ಕಾದಂಬರಿಗಳನ್ನು ಓದಲು ಶುರು ಮಾಡಿದ್ದಾನಲ್ಲ?

ಕಿಟ್ಟು: ಹೌದು, ಅವನಿಗೆ ಒಮ್ಮೆ ಹಳೆಯ ಕಾದಂಬರಿ ಪುಟದಲ್ಲಿ 500 ರೂಪಾಯಿ ಸಿಕ್ಕಿತ್ತಂತೆ.

***

ಪುಟ್ಟಣ್ಣ: ಕಿಟ್ಟು ಬಹಳಷ್ಟು ಹುಡುಗಿಯರಿಗೆ ಮದುವೆ ಮಾಡಿಕೊಳ್ಳುವ ಮನಸ್ಸೇ ಇಲ್ಲ.

ಕಿಟ್ಟು: ಇದು ನಿನಗೆ ಹೇಗೆ ಗೊತ್ತಾಯ್ತು?

ಪುಟ್ಟಣ್ಣ: ನಾನು ಅವರನ್ನು ಮದುವೆಯಾಗಲು ಕೇಳಿಕೊಂಡಾಗ.

***

ಡಾಕ್ಟರ್: ನೋಡಿಮ್ಮಾ, ನಿಮ್ಮವರಿಗೆ ವಿಶ್ರಾಂತಿ ಬೇಕಾಗಿದೆ, ಅದಕ್ಕೆ ಕೆಲವು ಮಾತ್ರೆಗಳನ್ನು ಕೊಡುತ್ತೇನೆ.

ಆಕೆ: ಸರಿ ಡಾಕ್ಟ್ರೇ, ಯಾವಾಗ ಎಷ್ಟು ಹೊತ್ತು ಕೊಡಬೇಕು?

ಡಾಕ್ಟರ್: ಅವರಿಗಲ್ಲಮ್ಮಾ, ಮಾತ್ರೆಗಳನ್ನು ತೆಗೆದುಕೊಳ್ಳಬೇಕಾಗಿರುವುದು ನೀನು.

***

ಶರತ್: ಸೋಮು ನೀನು ಯಾವತ್ತಾದರೂ ಆಶ್ಚರ್ಯಕರವಾದ ದೃಶ್ಯ ನೋಡಿದ್ದೀಯಾ?

ಸೋಮು: ನೋಡಿದ್ದೇನೆ.

ಶರತ್: ಎಲ್ಲಿ?

ಸೋಮು: ಒಮ್ಮೆ ಒಬ್ಬಾಕೆ ಬ್ಯೂಟಿ ಪಾರ್ಲರ್ ಒಳಗೆ ಹೋದಳು. ಸ್ವಲ್ಪ ಸಮಯದ ನಂತರ ಅಲ್ಲಿಂದ ಮತ್ತಾರೋ ಬಂದರು.

***

ಮೇಷ್ಟು: ಕಲಿಯುಗದಲ್ಲಿ ನಾರದ ಮುನಿಯ ಸಮಕ್ಕೆ ತ್ರಿಲೋಕದ ಜ್ಞಾನ ಹೊಂದಿದವರು ಯಾರು?

ಗುಂಡ: ಗೂಗಲ್ ಸರ್

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ